ದಿನಾಂಕ: 30-06-2009ನೇ ಮಂಗಳವಾರ ಅಪರಾಹ್ನ 3-00 ಗಂಟೆಗೆ ಸರಿಯಾಗಿ ಉಳ್ಳಾಲ ಪುರಸಭೆಯ ಕಚೇರಿಯ ಸಭಾಂಗಣದಲ್ಲಿ ಪುರಸಭಾ ಅಧ್ಯಕ್ಷರಾದ ಶ್ರೀ ಯು.ಎ ಇಸ್ಮಾಯಿಲ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಾಮಾನ್ಯ ಸಭೆಯ ನಡವಳಿಗಳು

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು

--------

ಸಭೆಯ ಪ್ರಾರಂಭದಲ್ಲಿ ಇತ್ತೀಚೆಗೆ ನಿಧನರಾದ ಶ್ರೀ ಪುರುಷೋತ್ತಮ ಶೆಟ್ಟಿ ಮತ್ತು ಶ್ರೀ ರಾಮಚಂದ್ರ ಉಚ್ಚಿಲ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ವಿಷಯ: 50: ಹಿಂದಿನ ಸಾಮಾನ್ಯ ಸಭೆಯ ನಡವಳಿ (30-05-2009) ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ವಿಷಯನಂಬ್ರ: 25(ದಿನಾಂಕ 30-05-2009)ಕ್ಕೆ ಸದಸ್ಯರಾದ ಶ್ರೀ ದಿನಕರ್ ಉಳ್ಳಾಲ್ ಇವರ ಆಕ್ಷೇಪವನ್ನು ದಾಖಲಿಸಿ ಉಳಿದ ಎಲ್ಲಾ ನಡವಳಿಗಳನ್ನು ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ: 51: ಏಪ್ರಿಲ್ 2009 ಮತ್ತು ಮೇ 2009 ತಿಂಗಳ ಜಮಾಖರ್ಚು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ:52: ಉಳ್ಳಾಲ ಪುರಸಭಾ ಸ್ಥಾಯಿಸಮಿತಿ ಅದ್ಯಕ್ಷರ ಮತ್ತು ಸದಸ್ಯರ ಅವಧಿಯು ಒಂದು ವರ್ಷಕ್ಕೆ ಸೀಮಿತವಾಗಿರುವುದರಿಂದ ದಿನಾಂಕ 08-06-09ಕ್ಕೆ ಮುಕ್ತಾಯವಾಗಿದ್ದು, ಹೊಸ ಸ್ಥಾಯಿಸಮಿತಿ ರಚನೆ ಕುರಿತು.
ನಿರ್ಣಯ: ಕರ್ನಾಟಕ ಪುರಸಭಾ ಅಧಿನಿಯಮ 1964ರ ಪ್ರಕರಣ 63 ಮತ್ತು 66ರಂತೆ ಸ್ಥಾಯಿಸಮಿತಿ ಸದಸ್ಯರನ್ನು ಮತ್ತು ಸದಸ್ಯರು ಸ್ಥಾಯಿಸಮಿತಿ ಅದ್ಯಕ್ಷರನ್ನು ಒಮ್ಮತದಿಂದ ಈ ಕೆಳಗಿನಂತೆ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

1. ಶ್ರೀ ಬಾಜಿಲ್ ಡಿಸೋಜ
2. ಶ್ರೀ ಯು.ಎಚ್.ಫಾರೂಕ್
3. ಶ್ರೀ ಎಂ. ಮುಸ್ತಾಫ
4. ಶ್ರೀ ಫಾರೂಕ್, ಉಳ್ಳಾಲ
5. ಶ್ರೀ ಅಬ್ದುಲ್ ಪತ್ತಾಕ್
6. ಶ್ರೀಮತಿ ಸ್ಟೆಲ್ಲಾ ಡಿಸೋಜ
7. ಶ್ರೀಮತಿ ಸುಹಾಸಿನಿ ದಾಮೋದರ
8. ಶ್ರೀ ಯು.ಕೆ. ಗೋಪಾಲ
9. ಶ್ರೀ ದಯಾನಂದ
10. ಶ್ರೀಮತಿ ರಜಿಯಾ ಇಬ್ರಾಹಿಂ
11. ಶ್ರೀ ಆಶ್ರಫ್‌ಬಾವ

ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಪ್ರಕರಣ 66ರಂತೆ ಸ್ಥಾಯಿಸಮಿತಿ ಅದ್ಯಕ್ಷರನ್ನಾಗಿ ಈ ಕೆಳಗಿನಂತೆ ಆಯ್ಕೆ ಮಾಡಲಾಯಿತು.
ಅಧ್ಯಕ್ಷರು, ಶ್ರೀ ಎಂ. ಮುಸ್ತಾಫ.
ಸೂಚಿಸಿದವರು: ಶ್ರೀ ಯು.ಎಚ್. ಫಾರೂಕ್
ಅನುಮೋದನೆ ಮಾಡಿದವರು: ಶ್ರೀ ಅಬ್ದುಲ್ ಪತ್ತಾಕ್

ವಿಷಯ: 53: 2009-2010ನೇ ಸಾಲಿಗೆ ಸ್ವಯಂಘೋಷಿತ ಆಸ್ತಿ ತೆರಿಗೆ ಪರಿಷ್ಕರಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ 2009-2010ನೇ ಸಾಲಿಗೆ 1-4-2009ರಿಂದ ಅನ್ವಯವಾಗುವಂತೆ ವಾಸ್ತವ್ಯ ಕಟ್ಟಡಗಳಿಗೆ ಈಗ ಇರುವ ಶೇ. 0.3ರಿಂದ ಶೇ 0.6ರಂತೆ ಮತ್ತು ವಾಣಿಜ್ಯ ಕಟ್ಟಡಗಳಿಗೆ ಈಗ ಇರುವ ಶೇ 0.4ರಿಂದ ಶೇ 0.8ರಂತೆ ಪರಿಷ್ಕರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:54: 2008-09ನೇ ಸಾಲಿನಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ವಸೂಲಾತಿಯಲ್ಲಿ ಅತ್ಯುತ್ತಮ ಸಾಧನೆಗೈದಿರುವ ಕುರಿತು ಆಯುಕ್ತರು ಪೌರಾಡಳಿತ ನಿರ್ದೇಶನಾಲಯ ಇವರ ಪತ್ರಸಂಖ್ಯೆ:ಪೌನಿ: DEV/SAS/ಸಿಆರ್: 2009-2010 ದಿನಾಂಕ 30-05-2009ರ ಪತ್ರದ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ತೆರಿಗೆ ಪಾವತಿಸಿರುವ ಪಟ್ಟಣದ ನಾಗರಿಕರಿಗೆಲ್ಲ ಅಭಿನಂದನೆ ಸಲ್ಲಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 55: ದಿನಾಂಕ 20-06-2009ರಂದು ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೋಟ್ಟು ವಾಣಿಜ್ಯ ಸಂಕೀರ್ಣದ ಸ್ಟಾಲುಗಳ ಏಲಂ ಪ್ರಕ್ರಿಯೆಯನ್ನು ಮಂಜೂರು ಮಾಡುವರೇ ಮಾನ್ಯ ಜಿಲ್ಲಾಧಿಕಾರಿಯವರನ್ನು ವಿನಂತಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಏಲಂನ್ನು ಖಾಯಂಮಾಡಲು ಮಂಜೂರಾತಿ ನೀಡುವರೇ ಮಾನ್ಯ ಜಿಲ್ಲಾಧಿಕಾರಿಯವರನ್ನು ವಿನಂತಿಸಲಾಗುವುದೆಂದು ನಿರ್ಣಯಿಸಲಾಯಿತು.

| **ಕ್ರ.ಸಂ** | **ಅಂಗಡಿ ಕೋಣೆ ಸಂಖ್ಯೆ** | **ಮರು ಪಾವತಿಸಲಾಗದ ಪ್ರೀಮಿಯಂ ಏಲಂ ಮೊತ್ತ (ಲಕ್ಷಗಳಲ್ಲಿ)** | **ಅತ್ಯಧಿಕ ಬಿಡ್ಡುದಾರರ ಹೆಸರು** |
|---|---|---|---|
| **1** | **2** | **3** | **4** |
| 1 | 7 | 261000.00 | ಮುರಳಿಮೋಹನ್, ಓವರ್‌ಬ್ರಿಡ್ಜ್ ತೊಕ್ಕೋಟ್ಟು |
| 2 | 11 | 205000.00 | ಜಾನಕಿ ಕೆ.ಕೋಂ ಪ್ರಕಾಶ್,ಕಾಫಿಕಾಡು, 1ನೇ ಅಡ್ಡರಸ್ತೆ, ಉಳ್ಳಾಲ |
| 3 | 17 | 223000.00 | ಕೆ.ಎಂ ಕೃಷ್ಣ ಬಿನ್. ಕೊರಗಮುಗೇರ, ಪಿಲಾರು ಲಕ್ಷ್ಮಿ ಗುಡ್ಡೆ |
| 4 | 19 | 202500.00 | ಬೇಬಿ ಕೋಂ. ತಿಮ್ಮಪ್ಪ, ಕಾಪಿಕಾಡು ಗಾಂಧಿನಗರ,ಉಳ್ಳಾಲ |
| 5 | 30 | 250000.00 | ಮುರಳಿಮೋಹನ್, ಓವರ್‌ಬ್ರಿಡ್ಜ್ ತೊಕ್ಕೋಟ್ಟು |
| 6 | 32 | 750000.00 | ಕೆ.ಎಂ ಕೃಷ್ಣ ಬಿನ್. ಕೊರಗಮುಗೇರ, ಪಿಲಾರು ಲಕ್ಷ್ಮಿ ಗುಡ್ಡೆ |
| 7 | 34 | 726000.00 | ಅಬ್ದುಲ್ ರಹೀಂ, ಬಿನ್ ಅಹಮ್ಮದ್ ಕುಟ್ಟಿ, ಅಟೊವಲ್ಡ್, ಕಲ್ಲಾಪು, ಪೆರ್ಮನ್ನೂರು |
| 8 | 35 | 405000.00 | ಮೆಹರುನ್ನೀಸಾ ಕೋಂ ಅಬ್ದುಲ್ ರಹೀಂ ಸೂಪರ್ ಆಯಿಲ್ ಮಿಲ್, ಬಬ್ಬುಕಟ್ಟೆ, |
| 9 | 36 | 452000.00 | ಮೆಹರುನ್ನೀಸಾ ಕೋಂ ಅಬ್ದುಲ್ ರಹೀಂ ಸೂಪರ್ ಆಯಿಲ್ ಮಿಲ್, ಬಬ್ಬುಕಟ್ಟೆ |
| 10 | 38 | 212000.00 | ಅಬ್ದುಲ್ ರಹೀಂ, ಬಿನ್ ಅಹಮ್ಮದ್ ಕುಟ್ಟಿ, ಅಟೊವಲ್ಡ್, ಕಲ್ಲಾಪು |
| 11 | 50 | 301000.00 | ಜುಬೇದಾ ರಹಿಮಾನ್ ಕೋಂ ರಹಿಮಾನ್ ಬಿರ್ಲಾ ಕಂಪೌಂಡು, ಮುಕ್ಕಚೇರಿ ಉಳ್ಳಾಲ. |

ವಿಷಯ: 56: ಉಳ್ಳಾಲ ಪುರಸಭಾ ಕಚೇರಿಯ ಸ್ಟಾಲುಗಳ ಏಲಂ ಪ್ರಕ್ರಿಯೆಯನ್ನು ಮಂಜೂರು ಮಾಡುವರೇ ಮಾನ್ಯ ಜಿಲ್ಲಾಧಿಕಾರಿಯವರನ್ನು ವಿನಂತಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸದ್ರಿ ವಾಣಿಜ್ಯ ಸಂಕೀರ್ಣದ ಹತ್ತಿರ ಜನಸಂಚಾರ ಕಡಿಮೆ ಇದ್ದು ಅಂಗಡಿಕೋಣೆಗಳಿಗೆ ಬೇಡಿಕೆ ಕಡಿಮೆ ಇರುವುದರಿಂದ ದಿನಾಂಕ 22-06-2009ರ ಏಲಂನ್ನು ಖಾಯಂ ಮಾಡಲು ಮಂಜೂರಾತಿ ನೀಡುವರೇ ಮಾನ್ಯ ಜಿಲ್ಲಾಧಿಕಾರಿಯವರನ್ನು ವಿನಂತಿಸುವುದಾಗಿ ನಿರ್ಣಯಿಸಲಾಯಿತು.

| ಕ್ರ.ಸಂ | ಅಂಗಡಿನಂಬ್ರ | ಮರುಪಾವತಿಸಲಾಗದ ಪ್ರೀಮಿಯಂ ಏಲಂ ಮೊತ್ತ(ರೂ.ಗಳಲ್ಲಿ) | ಅತ್ಯಧಿಕ ಬಿಡ್ಡುದಾರರು |
|---|---|---|---|
| 1 | 1 | 27000.00 | ಚಂದ್ರಕಲಾ ಬಿನ್. ವೆಂಕಪ್ಪ, ಉಳ್ಳಾಲ ಉಳಿಯ |
| 2 | 4 | 38700.00 | ಅಪ್ಸ, ಕೋಂ ರಶೀದ್, ಮಿಲ್ಲತ್ ನಗರ ಉಳ್ಳಾಲ |
| 3 | 11 | 101000.00 | ಗಣೇಶ ಯು ಬಿನ್. ತೋಮ ಕಾಫಿಕಾಡು,ಉಳ್ಳಾಲ |
| 4 | 12 | 114500.00 | ಮುಬೀನಾ ಕೋಂ ಮುಸ್ತಾಫ, ಮೇಲಂಗಡಿ ಉಳ್ಳಾಲ |

ವಿಷಯ; 57: 2009-2010ನೇ ಸಾಲಿಗೆ ಉಳ್ಳಾಲ ಮತ್ತು ತೊಕ್ಕೊಟ್ಟು ದಿನವಹೀ ಮೀನು ಮಾರ್ಕೆಟು ಏಲಂ ಆಗಿದ್ದು ಆಡಳಿತಾತ್ಮಕ ಮಂಜೂರಾತಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಉಳ್ಳಾಲ ಮೀನು ಮಾರ್ಕೆಟು ದಿನಾಂಕ 01-08-2009ರಿಂದ 31-03-2010ರತನಕ ಏಲಂ ಕರೆಯಲಾಗಿ ಶ್ರೀ ಮೊಹಿದಿನಬ್ಬ, ಚೋಟಾ ಮಂಗಳೂರು ಇವರು ಸೂಚಿಸಿದ ರೂ. 3250-00(8ತಿಂಗಳಿಗೆ) ತೊಕ್ಕೊಟ್ಟು ಮೀನು ಮಾರ್ಕೆಟು ದಿನಾಂಕ 01-08-2009ರಿಂದ 31-03-2010ರತನಕ ಏಲಂ ಕರೆಯಲಾಗಿ ಶ್ರೀ ಯತೀನ್ ಬಿನ್. ಚಂದ್ರಕಾಂತ ಮಡ್ಯಾರ್ ಕೋಟೆಕಾರು ಇವರು ಸೂಚಿಸಿದ ರೂ.12,200(8 ತಿಂಗಳಿಗೆ) ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ: 58: 2009-2010ನೇ ಸಾಲಿಗೆ ಶೇ18ರ ಪುರಸಭಾನಿಧಿಯ ಕ್ರಿಯಾಯೋಜನೆಗಳನ್ನು ಮಂಜೂರು ಮಾಡುವ ಕುರಿತು.

| | | |
|---|---|---|
| | **ಶೈಕ್ಷಣಿಕ ಕಾರ್ಯಕ್ರಮ ಶೇ 40 ರೂ. 440000/-** | |
| 1 | ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ತಲಾ ರೂ. 1000/-ದಂತೆ ಪ್ರೌಢಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ತಲಾ ರೂ. 1500/-ರಂತೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ತಲಾ ರೂ. 3000/-ದಂತೆ ಪ್ರೋತ್ಸಾಹಧನ | 300000.00 |
| 2 | ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ ಉನ್ನತ ಶಿಕ್ಷಣ ಪ್ರೋಪೇಶನಲ್ ಕೋರ್ಸುಗಳನ್ನು ಮಾಡುವ ವಿದ್ಯಾರ್ಥಿಗಳ ಶುಲ್ಕ ಭರಿಸುವ ಬಗ್ಗೆ | 140000.00 |
| | | **440000.00** |
| | **ಆರ್ಥಿಕ ಅಭಿವೃದ್ಧಿ ಶೇ 40 ರೂ. 440000/-** | |
| 1 | ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ 7 ಪಲಾನುಭವಿಗಳಿಗಾಗಿ ತಲಾ ರೂ. 40000/-ದಂತೆ ಮನೆ ರಿಪೇರಿ | 280000.00 |
| 2 | ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ 10 ಪಲಾನುಭವಿಗಳಿಗಾಗಿ ತಲಾ ರೂ. 15000/-ದಂತೆ ಶೌಚಾಲಯ ವ್ಯವಸ್ಥೆ ಕುರಿತು. | 150000.00 |
| 3 | ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ 2 ಅತಿ ಬಡಕುಟುಂಬದ ಫಲಾನುಭವಿಯ ಹೆಣ್ಣು ಮಕ್ಕಳ ಮದುವೆಗೆ ತಲಾ ರೂ. 5000/-ದಂತೆ ಸಹಾಯಧನ | 10000.00 |
| | | **440000.00** |
| | **ಇತರ ಕಾರ್ಯಕ್ರಮ ಶೇ20 ರೂ. 220000/-** | |
| 1 | ಪೌರಕಾರ್ಮಿಕ ದಿನಾಚರಣೆ ಮತ್ತು ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದವರು ಶೇ18ರ ಅನುದಾನದಡಿ ಕಾರ್ಯಕ್ರಮಗಳನ್ನು ಅಯೋಜಿಸುವ ಬಗ್ಗೆ(ಜಾಹಿರಾತು, ಬ್ಯಾನರ್)ಉಪಹಾರ, ಮೈಕ್ ಪೋಟೋ1, ಪತ್ರಿಕಾ ಪ್ರಕಟಣೆ ವೀಡಿಯೋ ಇತ್ಯಾದಿ ಕುರಿತಂತೆ ಇತರ ಖರ್ಚುಗಳ ಬಗ್ಗೆ | 20000.00 |
| 2 | ಉಳ್ಳಾಲ ಪುರಸಭಾ ವ್ಯಾಪ್ತಿಯ ಪ,ಜಾತಿ/ಪ.ಪಂಗಡದ ಪ್ರದೇಶಗಳಲ್ಲಿರುವ ದೈವಸ್ಥಾನಗಳ ಬಳಿ ಸೋಡಿಯಂ ಲೈಟು ಅಳವಡಿಸುವುದು | 100000.00 |
| 3 | ಉಳ್ಳಾಲ ಪುರಸಭಾ ವ್ಯಾಪ್ತಿಯ ಪೆರ್ಮನ್ನೂರು ಸೇವಂತಿಗುಡ್ಡೆಯ ಶ್ರೀಮತಿ ಪುಷ್ಪಾವತಿ ಅವರ ಮನೆ ಬಳಿ ಮೆಟ್ಟಿಲು ರಚನೆ | 25000.00 |
| 4 | ಉಳ್ಳಾಲ ಪುರಸಭಾ ವ್ಯಾಪ್ತಿಯ ಚೆಂಬುಗುಡ್ಡೆ ವೈದ್ಯನಾಥ ಭಜನಾಮಂದಿರದ ಹಿಂದುಗಡೆ ಸಾರ್ವಜನಿಕ ರಸ್ತೆಗೆ ಮೆಟ್ಟಿಲು ರಚನೆ | 25000.00 |
| 5 | ಉಳ್ಳಾಲ ಪುರಸಭಾ ವ್ಯಾಪ್ತಿಯ ಪಟ್ಲ ಗಂಡಿ ವಾರ್ಡಿನ ಅಂಬೋಡಿ ಗುರುವಪ್ಪ ಮನೆಯಿಂದ ಶಿವಪ್ಪ ಮನೆವರೆಗೆ ಕಾಲುದಾರಿ ಅಭಿವೃದ್ಧಿ | 25000.00 |
| 6 | ಉಳ್ಳಾಲ ಪುರಸಭಾ ವ್ಯಾಪ್ತಿಯ ಕಾಫಿಕಾಡು ಶಂಕರ ಅವರ ಮನೆ ಬಳಿ ಮೋರಿ ರಚನೆ | 25000.00 |
| | **ಒಟ್ಟು** | **220000.00** |

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ 2009-2010ನೇ ಸಾಲಿಗೆ ಶೇ18ರ ಪುರಸಭಾ ನಿಧಿಯ ಕ್ರಿಯಾಯೋಜನೆಗಳನ್ನು ಮಂಜೂರು ಮಾಡಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಆಡಳಿತಾತ್ಮಕ ಮಂಜೂರಾತಿಗಾಗಿ ಕಳುಹಿಸುವುದೆಂದು ನಿರ್ಣಯಿಸಲಾಯಿತು.

ವಿಷಯ:59: ಪುರಸಭಾ ನಿಧಿಯ ಕಾಮಗಾರಿಗಳ ಟೆಂಡರು ಮಂಜೂರು ಮಾಡುವ ಕುರಿತು.

1. ಉಳ್ಳಾಲ ಪುರಸಭೆ ವ್ಯಾಪ್ತಿಯ ಭಟ್ರಗುಡ್ಡೆ ಮೇಸ್ತ್ರಿ ಮಂಜಪ್ಪ ಕಂಪೌಂಡು ಬಳಿ, ಚೆಂಬುಗುಡ್ಡೆ, ಧರ್ಮನಗರ, ಕಕ್ಕೆತೋಟ, ಮಾಸ್ತಿಕಟ್ಟೆ, ಬಬ್ಬುಕಟ್ಟೆ, ಕೋಟೆಪುರ ಸೇವಂತಿಗುಡ್ಡೆ ತೊಕ್ಕೋಟ್ಟು ಬಸ್‌ಸ್ಟ್ಯಾಂಡ್,ಪಂಡಿತಹೌಸ್ ಬಳಿ ನೀರಿನ ಪೈಪು ವಿಸ್ತರಿಸಿ ಪೆನಲ್ ಬೋರ್ಡು ಅಳವಡಿಸುವ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಿದ ಕಾರಣ ಘಟನೋತ್ತರ ಮಂಜೂರಾತಿ ನೀಡುವ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಘಟನೋನೋತ್ತರ ಮಂಜೂರಾತಿ ನೀಡುವುದಾಗಿ ನಿರ್ಣಯಿಸಲಾಯಿತು.

2. ಉಳ್ಳಾಲ ಪುರಸಭಾ ವ್ಯಾಪ್ತಿಯ 10ನೇ ವಾರ್ಡು ಟಿ.ಸಿ.ರಸ್ತೆ ಎಂಬಲ್ಲಿ ಚರಂಡಿ ಅಭಿವೃದ್ದಿ, ಪುರಸಭಾ ವ್ಯಾಪ್ತಿಯ 14ನೇ ವಾರ್ಡಿನ ಡ್ರೈವರ್ ಬಾಬು ಡಿಸೋಜರ ಮನೆ ಬಳಿ ಚರಂಡಿ ಅಭಿವೃದ್ಧಿ ಮತ್ತು 15ನೇ ವಾರ್ಡಿನ ಡ್ರೈವರು ಲಕ್ಷ್ಮಣ ಮನೆಗೆ ಹೋಗುವ ದಾರಿ ಬದಿಕಟ್ಟುವ ಕಾಮಗಾರಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.

ನಿರ್ಣಯ: ಈ ಬಗ್ಗೆ ಪರಿಶೀಲಿಸಿ ಬಂದ ಟೆಂಡರುಗಳಲ್ಲಿ ಶ್ರೀ ಬಿ.ಎಸ್. ಶರೀಫ್, ಜೋಕಟ್ಟೆ ಇವರ ಟೆಂಡರುದರ ಶೇ7 ಅಧಿಕದರ ಕನಿಷ್ಠ ದರವಾಗಿದ್ದು ಸದ್ರಿ ದರವನ್ನು ಒಪ್ಪದೆ ಅಂದಾಜುಪಟ್ಟಿಯ ದರವನ್ನು ಒಪ್ಪಿ ಮಂಜೂರು ಮಾಡಲು ಘಟನೋತ್ತರ ಮಂಜೂರಾತಿ ನೀಡಲಾಯಿತು.

ವಿಷಯ:59(3): ಪುರಸಭಾ ನಿಧಿಯ ಕಾಮಗಾರಿಗಳ ಟೆಂಡರು ಮಂಜೂರು ಮಾಡುವ ಕುರಿತು.

3.ಉಳ್ಳಾಲ ಪುರಸಭಾ ವ್ಯಾಪ್ತಿಯ ಪೊಲಿಕೆರೆಯ ಮೋರಿಯ ಹತ್ತಿರದಿಂದ ಎ.ಎ.ಕಾದರ್ ಮನೆ ಎದುರು ರಸ್ತೆ ಅಭಿವೃದ್ದಿ ಕಾಮಗಾರಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಘಟನೋತ್ತರ ಮಂಜೂರಾತಿ ನೀಡುವ ಕುರಿತು.

ನಿರ್ಣಯ: ಕಾಮಗಾರಿಗೆ ಬಂದ ಎರಡು ಟೆಂಡರುಗಳನ್ನು ಪರಿಶೀಲಿಸಿ ಶ್ರೀ ಮಹಮ್ಮದ್ ಕುಂಞಿರವರು ಟೆಂಡರುದರ ಅಂದಾಜುಪಟ್ಟಿಯ ದರದ ಶೇ7 ಅಧಿಕ ಕನಿಷ್ಟ ದರವಾಗಿದ್ದರೂ ಸದ್ರಿ ದರವನ್ನು ಒಪ್ಪದೆ ಅಂದಾಜುಪಟ್ಟಿಯ ದರದಲ್ಲಿ ಕಾಮಗಾರಿ ನಿರ್ವಹಿಸಲು ಗುತ್ತಿಗೆದಾರರು ಒಪ್ಪಿ ಕಾಮಗಾರಿ ನಿರ್ವಹಿಸಿದನ್ನು ಘಟನೋತ್ತರ ಮಂಜೂರಾತಿ ನೀಡಲಾಯಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇತರ ವಿಷಯಗಳು.**

ವಿಷಯ:60: ಉಳ್ಳಾಲ ಪುರಸಭಾ ವ್ಯಾಪ್ತಿಯ ನಿರ್ಮಲನಗರ ಯೋಜನೆಯನ್ನು ಅನುಷ್ಠಾನಗೊಳಿಸುವರೇ ಪೌರಾಡಳಿತ ನಿರ್ದೇಶನಾಲಯದ ಸೂಚನೆಯಂತೆ ವಾರ್ಡುಸಂಖ್ಯೆ11ರಿಂದ 20ನೇ ವಾರ್ಡಿನ ಕಟ್ಟಡ ಮಾಲಕರಿಗೆ ಸಿ ಫಾರಂ ನೀಡಲು ಎಸ್‌ಜೆಎಸ್‌ಆರ್‌ವೈಯ ಉಳಿತಾಯ ಗುಂಪಿನ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಂಘ ಸಂಸ್ಥೆಗಳ ಸದಸ್ಯರಿಗೆ ದಿನ ಮಜೂರಿ ನೀಡುವ ಬಗ್ಗೆ.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸಿ ಫಾರಂನ್ನು ವಿತರಿಸಿದ ಬಗ್ಗೆ ಎಸ್‌ಜೆಎಸ್‌ಆರ್‌ವೈಯ ಉಳಿತಾಯ ಗುಂಪಿನ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಂಘ ಸಂಸ್ಥೆಗಳ ಸದಸ್ಯರಿಗೆ ದಿನ ಒಂದಕ್ಕೆ ಒಬ್ಬರಿಗೆ ರೂ. 125.00ರಂತೆ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:61: ಪುರಸಭೆಯ ಪಂಪುಚಾಲಕರಾದ ಶ್ರೀ ಎಸ್.ಭುಜಂಗರವರಿಗೆ ದಿನಾಂಕ 4-6-2009ರಂದು ಮಂಗಳೂರಿನ ಮಂಗಳ ಆಸ್ಪತ್ರೆ ಮತ್ತು ಮಂಗಳ ಕಿಡ್ನಿ ಫೌಂಡೇಷನ್‌ನಲ್ಲಿ ಮೂಲವ್ಯಾಧಿಗೆ ಶಸ್ತ್ರಚಿಕಿತ್ಸೆ ಮಾಡಿಸಿದ ಬಗ್ಗೆ ಸರ್ಕಾರದ ನಿಯಮಾವಳಿಯಂತೆ ಶಸ್ತ್ರಚಿಕಿತ್ಸೆ ಮತ್ತು ವೈದ್ಯಕೀಯ ವೆಚ್ಚ ಪಾವತಿಸಬೇಕಾಗಿ ಆಸ್ಪತೆಯ ಬಿಲ್ಲು ಮತ್ತು ದಾಖಲೆಗಳೊಂದಿಗೆ ದಿನಾಂಕ 24-6-2009ರಂದು ಬರಕೊಂಡ ಅರ್ಜಿಯ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸರಕಾರದ ನಿಯಮಾವಳಿಯಂತೆ ಶಸ್ತ್ರಚಿಕಿತ್ಸೆ ಮತ್ತು ವೈದ್ಯಕೀಯ ವೆಚ್ಚ ಪಾವತಿಸುವರೇ ಮಂಜೂರಾತಿಗಾಗಿ ಮಾನ್ಯ ಜಿಲ್ಲಾಧಿಕಾರಿಯವರನ್ನು ವಿನಂತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:62: ಉಳ್ಳಾಲ ಪುರಸಭೆಯಲ್ಲಿ 1994-1995ರಿಂದ 20-3-2004ರವರೆಗೆ ಒಟ್ಟು 187 ಅಡಿಟ್ ಆಕ್ಷೇಪಣೆಗಳು ಮತ್ತು ವಸೂಲಾತಿಯಲ್ಲಿಯೂ 53 ಆಕ್ಷೇಪಣೆಗಳಿದ್ದು, ಈ ಬಗ್ಗೆ ದಿನಾಂಕ 25-2-2005ರಂದು ಜರುಗಿದ ನಗರ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಯವರು ಈ ಬಗ್ಗೆ ನಿವೃತ್ತ ಲೆಕ್ಕ ಪರಿಶೋಧಕರು ಅಥವಾ ಖಜಾನೆ ಇಲಾಖೆಯ ನಿವೃತ್ತ ಸಿಬ್ಬಂದಿಗಳನ್ನು ನಿಯೋಜಿಸಿ ಅಡಿಟ್ ವರದಿಗಳ ಆಕ್ಷೇಪಣಾ ಪಾರಾಗಳಿಗೆ ಉತ್ತರಿಸುವರೇ ಕ್ರಮಕೈಗೊಳ್ಳಬೇಕಾಗಿ ತಿಳಿಸಿದ ಕುರಿತು ಮತ್ತು ಕಚೇರಿಯ ವಿವಿಧ ವಿಭಾಗಗಳಲ್ಲಿ ಹಲವಾರು ಕಡತಗಳಿಗೆ ಮತ್ತು ಪತ್ರಗಳಿಗೆ ವ್ಯವಹರಿಸುವರೇ ಬಾಕಿಯಾಗಿದ್ದು, ಅಲ್ಲದೆ 2010ರಲ್ಲಿ ಜರುಗಲಿರುವ ಉಳ್ಳಾಲ ಸೈಯ್ಯದ್ ಮದನಿ ದರ್ಗಾದ ಉರೂಸು ಸಮಾರಂಭದ ಪ್ರಯುಕ್ತ ಕಾರ್ಯಕ್ರಮಗಳ ಬಗ್ಗೆ ಪತ್ರ ಮೂಲಕ ವ್ಯವಹರಿಸುವರೇ ಹಾಗೂ ಅನುಭವೀ ಸಿಬ್ಬಂದಿಗಳ ಕೊರತೆಯಿಂದಾಗಿ ಸಿಬ್ಬಂದಿಗಳಿಗೆ ಸಂಬಂಧಿಸಿದ ಕಡತಗಳ ಮತ್ತು ಸೇವಾವಹಿಗಳ ಕೆಲಸಗಳು ಬಾಕಿಯಾಗಿರುವುದರಿಂದ ಕಚೇರಿಗೆ ಒಬ್ಬ ಅನುಭವಿ ಸಿಬ್ಬಂದಿಯನ್ನು ತಾತ್ಕಾಲಿಕ ನೆಲೆಯಲ್ಲಿ ನಿಯೋಜಿಸುವ ಕುರಿತು ಮತ್ತು ಈ ಬಗ್ಗೆ ಕಚೇರಿ ಟಿಪ್ಪಣಿ.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪ್ರಸ್ತುತ ಜಿಲ್ಲೆಯ ವಿವಿಧ ಪುರಸಭೆಗಳಲ್ಲಿ ಮತ್ತು ಈ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸಿ ಅನುಭವವಿರುವ ಪುರಸಭಾ ನಿವೃತ್ತ ಸಿಬ್ಬಂದಿಯಾದ

ಶ್ರೀ ಎನ್. ಅಬ್ದುಲ್ ಕರೀಂರವರನ್ನು ಖಾಲಿ ಇರುವ ದ್ವಿ.ದ.ಸ. ಹುದ್ದೆಯಲ್ಲಿ ದಿನಾಂಕ 1-12-2008ರಿಂದಲೇ ತಾತ್ಕಾಲಿಕ ನೆಲೆಯಲ್ಲಿ ನಿಯೋಜಿಸಿ ಮಾಸಿಕ ಸಂಭಾವನೆ ಪಾವತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:63: ಉಳ್ಳಾಲ ಪುರಸಭಾ ವ್ಯಾಪ್ತಿಯ 6ನೇ ವಾರ್ಡು ಉಳಿಯ ಮಾರ್ಗತಲೆ ಮಣ್ಣಿನ ರಸ್ತೆಗೆ 2 ಕಾಂಕ್ರೀಟು ಮೋರಿ ಅಳವಡಿಸುವಂತೆ ಸ್ಥಳೀಯ ಸದಸ್ಯರಾದ ಶ್ರೀ ಸುಂದರ ಉಳಿಯ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:64: ಉಳ್ಳಾಲ ಪುರಸಭಾ ಕಚೇರಿಗೆ ಅಗತ್ಯವಾಗಿ 3 ಕಪಾಟು ಮತ್ತು 2 ಮೇಜನ್ನು ಖರೀದಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೊಟೇಶನು ಕರೆದು ಗೋದ್ರೇಜ್ ಕಂಪೆನಿಯ ಕಪಾಟು ಮತ್ತು ಮೇಜನ್ನು ಖರೀದಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:65:ಉಳ್ಳಾಲ ಪುರಸಬಾ ಕಚೇರಿಯ ಕಂದಾಯ ವಿಭಾಗಕ್ಕೆ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯ 5000 ಹಣ ತುಂಬುವ ಚಲನನ್ನು ಸ್ಥಳೀಯ ಮುದ್ರಾಣಾಲಯದಿಂದ ಮುದ್ರಿಸಿ ತರಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೋಟೇಶನು ಕರೆದು ಮುದ್ರಿಸಿ ತರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:66: ಎಸ್.ಎಫ್.ಸಿ ಶೇ18ರ ನಿಧಿಯ ಕ್ರಿಯಾಯೋಜನೆಗಳನ್ನು ಅನುಷ್ಠಾನಗೊಳಿಸುವ ಕುರಿತು ದಿನಾಂಕ 03-06-2009ರಂದು ನಡೆದ ಆಯ್ಕೆ ಸಮಿತಿಯು ಕೈಗೊಂಡ ನಿರ್ಣಯಗಳು

1) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದ ಉನ್ನತ ವ್ಯಾಸಂಗ/ಐಎಎಸ್ ಹಾಗೂ ಕೆಪಿಎಸ್ ತರಬೇತಿ ಕೋರ್ಸು ಪ್ರೋಫೆಷನಲ್ ಕೋರ್ಸುಗಳಾದ ಪ್ಲಂಬರ್, ಇಲೆಕ್ಟ್ರಿಶಿಯನ್, ಕಂಪ್ಯೂಟರ್ ಹಾಗೂ ಜೆಸಿಬಿ ಅಪರೇಟರು ತರಬೇತಿಗಾಗಿ ಕೆ.ಪಿ.ಟಿ ಸರಕಾರಿ ಸಂಸ್ಥೆಗಳಲ್ಲಿ ಕೋರ್ಸುಗಳನ್ನು ಮಾಡುವ ವಿದ್ಯಾರ್ಥಿಗಳಿಗೆ ಅವರ ಶುಲ್ಕ ಭರಿಸುವುದು.
   ನಿರ್ಣಯ: ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ ಮಾಸಿಕ ಶಿಷ್ಯವೇತನ ರೂ.100.00ನ್ನು ನಿಗದಿಪಡಿಸಿ ಕೆಪಿಟಿ ಸಂಸ್ಥೆಗೆ ಕಳುಹಿಸುವುದೆಂದು ನಿರ್ಣಯಿಸಲಾಯಿತು.

2) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಪರಿಶಿಷ್ಟಜಾತಿ/ಪಂಗಡದ ಉನ್ನತ ವ್ಯಾಸಂಗ/ಪ್ರೊಫೆಶನಲ್ ಕೋರ್ಸುಗಳನ್ನು ಮಾಡಿ ಸಾಧನೆಗಳನ್ನು ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಸಹಾಯಧನ ನೀಡುವ ಬಗ್ಗೆ.
   ನಿರ್ಣಯ:ಈಗಾಗಲೇ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ವಿಕ್ರಾಂತ್ ಉಳ್ಳಾಲ್ ಬಿನ್. ವಸಂತ್ ಉಳ್ಳಾಲ್ ಅಂಬೇಡ್ಕರ್ ನಗರ ಚೆಂಬುಗುಡ್ಡೆ ಇವರಿಗೆ ಪುಟ್ಬಾಲ್ ಸ್ಪರ್ದೆಯಲ್ಲಿ ರಾಜ್ಯಮಟ್ಟವನ್ನು ಪ್ರತಿನಿಧಿಸಿದ ಬಗ್ಗೆ ರೂ. 5000-00 ಸಹಾಯಧನ ಮತ್ತು ವೈಶಾಕ್ ಬಿನ್ ಚಂದ್ರಹಾಸ್ ಪ್ರಜನ್ಯ ಉಳ್ಳಾಲ್ ಕಾಫಿಕಾಡು23-107/1 ಇವರಿಗೆ ಕರಾಟೆಯಲ್ಲಿ ರಾಜ್ಯಮಟ್ಟವನ್ನು ಪ್ರತಿನಿಧಿಸಿದ ಬಗ್ಗೆ ರೂ. 5000-00 ವಿಖ್ಯಾತ್.ವಿ. ಬಿನ್. ವಸಂತ್ ಉಳ್ಳಾಲ್ ಅಂಬೇಡ್ಕರ್ ನಗರ ಇವರಿಗೆ ವಾಲಿಬಾಲ್‌ನಲ್ಲಿ ರಾಜ್ಯಮಟ್ಟವನ್ನು ಪ್ರತಿನಿಧಿಸಿದ ಬಗ್ಗೆ ರೂ. 5000-00 ಸಹಾಯಧನವನ್ನು ನೀಡಿ ಸನ್ಮಾನಿಸುವುದಾಗಿ ನಿರ್ಣಯಿಸಲಾಯಿತು.

3) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪಂಗಡದ 15 ಮಹಿಳಾ ಮತ್ತು ಪುರುಷ ಫಲಾನುಭವಿಗಳಿಗೆ ಲಘುವಾಹನ ಚಾಲನಾ ತರಬೇತಿಯನ್ನು ಕೆ.ಪಿ.ಟಿ ಸಂಸ್ಥೆಯಿಂದ ನೀಡುವುದು.
   ನಿರ್ಣಯ:ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ ವಾಹನ ಚಾಲನಾ ತರಬೇತಿಗಾಗಿ ಕೆ.ಪಿ.ಟಿ ಸಂಸ್ಥೆಗೆ ಕಳುಹಿಸುವುದೆಂದು ನಿರ್ಣಯಿಸಲಾಯಿತು.

4) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪಂಗಡದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಏರ್ಪಡಿಸುವುದು.
   ನಿರ್ಣಯ: ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪರಿಶಿಷ್ಟ ಜಾತಿ/ಪಂಗಡದ ಮಕ್ಕಳ ಪಟ್ಟಿಯನ್ನು ಪುರಸಭಾ ವ್ಯಾಪ್ತಿಯ ಶಾಲಾ ಕಾಲೇಜುಗಳಿಂದ ಪಡೆದು ಶಾಲಾ ಕಾಲೇಜು ಅಧ್ಯಾಪಕರುಗಳ ಸಭೆ ನಡೆಸಿ ತಂಡ ರಚಿಸಿ ರಜಾ ತಿಂಗಳಿನಲ್ಲಿ ಹಮ್ಮಿಕೊಳ್ಳುವುದೆಂದು ನಿರ್ಣಯಿಸಲಾಯಿತು.

5) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಒಂಬತ್ತುಕೆರೆ ಬಬ್ಬುಕಟ್ಟೆ ಮತ್ತು ಜಿಲ್ಲಾ ಪಂಚಾಯತ್ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕಾಪಿಕಾಡು ಶಾಲೆಗಳಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅಗತ್ಯವಿರುವ ಪೀಠೋಪಕರಣ ಮತ್ತು ಕಂಪ್ಯೂಟರ್ ವ್ಯವಸ್ಥೆ ಒದಗಿಸುವ ಬಗ್ಗೆ.

ನಿರ್ಣಯ:ಟೆಂಡರು ಮೂಲಕ ಶಾಲೆಗಳಿಂದ ಅರ್ಜಿಗಳನ್ನು ಪಡೆದು ಒದಗಿಸುವುದೆಂದು ನಿರ್ಣಯಿಸಲಾಯಿತು.

6) ಉಳ್ಳಾಲ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ ಕುಟುಂಬಗಳ ಸಾಮಾಜಿಕ/ಆರ್ಥಿಕ/ಶೈಕ್ಷಣಿಕ/ಅಧ್ಯಯನ ಮಾಡಿ ವರದಿ ಸಿದ್ದಪಡಿಸುವ ಕುರಿತು ಹಾಗೂ ಸದ್ರಿ ಪಂಗಡಗಳ ಫಲಾನುಭವಿಗಳಿಗೆ ಕಾರ್ಯಾಗಾರ ಏರ್ಪಡಿಸುವುದು.

ನಿರ್ಣಯ: ಬಂಟ್ವಾಳ ಪುರಸಭೆಯ ಕಮ್ಯುನಿಟಿ ಆಫೇರ್ಸ್ ಅಫೀಸರ್ ಶ್ರೀ ಮತ್ತಡಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಎರಡು ಪಾಧ್ಯಾಪಕರನ್ನು ಹಾಗೂ ಪರಿಶಿಷ್ಟ ಜಾತಿ/ಪಂಗಡದ ಸಂಘಟನೆಯ 2 ಮುಖಂಡರ ಮೂಲಕ ಅಧ್ಯಯನ ಮಾಡಿ ವರದಿ ಸಿದ್ದಪಡಿಸುವುದೆಂದು ನಿರ್ಣಯಿಸಲಾಯಿತು.

7) ಉಳ್ಳಾಲ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ ಅಗತ್ಯವಿರುವ ಪ್ರದೇಶಗಳಲ್ಲಿ ಅಂಗನವಾಡಿ ಮತ್ತು ಸಾರ್ವಜನಿಕ ವಾಚನಾಲಯಗಳನ್ನು ರಚಿಸುವ ಕುರಿತು.

ನಿರ್ಣಯ: ಉಳ್ಳಾಲ ಪುರಸಭಾ ವ್ಯಾಪ್ತಿಯ ಚೆಂಬುಗುಡ್ಡೆಯಲ್ಲಿ ಅಂಗನವಾಡಿ/ವಾಚನಾಲಯಕ್ಕಾಗಿ ಸ್ಥಳವನ್ನು ಆಯ್ಕೆ ಮಾಡಿದ್ದು, ಟೆಂಡರು ಮೂಲಕ ಕಾಮಗಾರಿಯನ್ನು ಪ್ರಾರಂಬಿಸುವುದು ಎಂದು ನಿರ್ಣಯಿಸಲಾಯಿತು.

8) ಉಳ್ಳಾಲ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ ಮಹಿಳೆಯರಿಗೆ ಕೆ.ಪಿ.ಟಿ ಸಂಸ್ಥೆಯಿಂದ ಬ್ಯೂಟಿಷಿಯನ್ ತರಬೇತಿ ನೀಡುವುದು.

ನಿರ್ಣಯ: ಬ್ಯೂಟಿಷಿಯನ್ ತರಬೇತಿಗಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಾಸಿಕ ರೂ.100-00 ಶಿಷ್ಯವೇತನ ನೀಡಿ ಕೆಪಿಟಿ ಸಂಸ್ಥೆಗೆ ಕಳುಹಿಸುವುದೆಂದು ನಿರ್ಣಯಿಸಲಾಯಿತು.

9) ಉಳ್ಳಾಲ ಪುರಸಭಾ ವ್ಯಾಪ್ತಿಯ ಜಿಲ್ಲಾ ಪಂಚಾಯತ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಒಂಬತ್ತುಕೆರೆ ಮತ್ತು ಬಬ್ಬುಕಟ್ಟೆ ಹಾಗೂ ಜಿಲ್ಲಾ ಪಂಚಾಯತ್ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕಾಪಿಕಾಡು ಶಾಲೆಗಳಿಗೆ ಹೆಣ್ಮಕ್ಕಳ ಅನುಕೂಲಕ್ಕಾಗಿ ಶೌಚಾಲಯ ವ್ಯವಸ್ಥೆ.

ನಿರ್ಣಯ: ಒಂಬತ್ತುಕೆರೆ ಬಬ್ಬುಕಟ್ಟೆ ಹಾಗೂ ಕಾಫಿಕಾಡು ಶಾಲೆಗಳಿಗೆ ತಲಾ ರೂ. 100000-00 ವೆಚ್ಚದಲ್ಲಿ ಶೌಚಾಲಯ ನಿರ್ಮಾಣವನ್ನು ಟೆಂಡರು ಮೂಲಕ ಪ್ರಾರಂಭಿಸುವುದೆಂದು ನಿರ್ಣಯಿಸಲಾಯಿತು.

10) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪಂಗಡದ ಪ್ರದೇಶದಲ್ಲಿರುವ ಚೆಂಬುಗುಡ್ಡೆ ಅಂಗನವಾಡಿ ಕೇಂದ್ರಕ್ಕೆ ಮಕ್ಕಳ ಅಗತ್ಯಕ್ಕೆ ತಕ್ಕಂತೆ ಸೂಕ್ತ ವ್ಯವಸ್ಥೆ ಒದಗಿಸುವ ಕುರಿತು

ನಿರ್ಣಯ: ಚೆಂಬುಗುಡ್ಡೆ ಅಂಗನವಾಡಿ ಕಟ್ಟಡ ಪ್ರಾರಂಭವಾದ ಕೂಡಲೇ ಅಗತ್ಯವಿರುವ ವ್ಯವಸ್ಥೆಗಳನ್ನು ಮಾಡುವುದೆಂದು ನಿರ್ಣಯಿಸಲಾಯಿತು.

11) ಉಳ್ಳಾಲ ಪುರಸಭಾ ವ್ಯಾಪ್ತಿಯ ಅಬ್ಬಂಜರ ಪರಿಶಿಷ್ಟ ಜಾತಿ/ಪಂಗಡದ ಕಾಲನಿಯಲ್ಲಿ ನಡೆಯುತ್ತಿರುವ ಮುಂದುವರಿಕಾ ಶಿಕ್ಷಣ ಕೇಂದ್ರಕ್ಕೆ ಅಗತ್ಯವಿರುವ ವ್ಯವಸ್ಥೆಗಳನ್ನು ಮಾಡುವ ಕುರಿತು.

ನಿರ್ಣಯ: ಅಬ್ಬಂಜರದಲ್ಲಿ ಮುಂದುವರಿಕಾ ಶಿಕ್ಷಣ ಕೇಂದ್ರ ನಡೆಯುತ್ತಿರುವ ಬಗ್ಗೆ ಸ್ಥಳೀಯ ಜನ ಪ್ರತಿನಿಧಿಯವರೊಂದಿಗೆ ಪರಿಶೀಲಿಸಿ ನಂತರ ಬೇಕಾದ ವ್ಯವಸ್ಥೆ ಮಾಡುವುದೆಂದು ನಿರ್ಣಯಿಸಲಾಯಿತು.

**11.ಅರ್ಥಿಕ ಅಭಿವೃದ್ಧಿ**

1) ಉಳ್ಳಾಲ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ 22ಜನ ಫಲಾನುಭವಿಗಳಿಗೆ ತಲಾ ರೂ. 40000-00ದಂತೆ ಮನೆ ದುರಸ್ತಿಗಾಗಿ

ನಿರ್ಣಯ: ಪುರಸಭಾ ವ್ಯಾಪ್ತಿಯ ಈ ಕೆಳಗಿನ 22ಮಂದಿ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳಿಗೆ ರೂ 40000-00ದಂತೆ ಮನೆ ದುರಸ್ತಿಗೆ ನೀಡುವುದೆಂದು ನಿರ್ಣಯಿಸಲಾಯಿತು.

1. ಹರಿಣಾಕ್ಷಿ ಅಂಬೇಡ್ಕರ್ ನಗರ ಚೆಂಬುಗುಡ್ಡೆ 3-65/12
2. ನೇತ್ರಾವತಿ ಕೋಂ ಅಶೋಕ್, ಮನೆನಂಬ್ರ: 3-65/11, ಅಂಬೇಡ್ಕರ್ ನಗರ ಚೆಂಬುಗುಡ್ಡೆ
3. ಗಿರೀಶ್ ಬಿನ್.ದಾಮೋದರ 3-65/6 ಚೆಂಬುಗುಡ್ಡೆ

4. ಪುಷ್ಪ ಕೋಂ ದಿ. ಸುಧಾಕರ ಮನೆನಂಬ್ರ: 3–65/9 ಚೆಂಬುಗುಡ್ಡೆ
5. ಸುರೇಶ್ ಅಂಬೋಡಿ ಮನೆ ಪೆರ್ಮನ್ನೂರು
6. ಪುಷ್ಪಾವತಿ ಸೇವಂತಿಗುಡ್ಡೆ ಮನೆನಂಬ್ರ: 4–216ಡಿ
7. ರಾಘವ ಮನೆನಂಬ್ರ: 3–65/3,ಚೆಂಬುಗುಡ್ಡೆ ಪೆರ್ಮನ್ನೂರು
8. ಗೌರಿ ಕೋಂ ದಿ. ಕಿಟ್ಟಿ 23–104/3 ಕಾಫಿಕಾಡು ಉಳ್ಳಾಲ
9. ಅಪ್ಪಿ ಕೊಂ ಸಂಕಪ್ಪ 18–45 ಅಬ್ಬಂಜರ ಉಳ್ಳಾಲ
10. ರಘುನಾಥ ಬಿನ್ ಬಾಬು 18–43 ಅಬ್ಬಂಜರ ಉಳ್ಳಾಲ
11. ಸೀತು ಕೋಂ ದಿ. ತೋಮ, 23–95/1 ಕಾಫಿಕಾಡು ಉಳ್ಳಾಲ
12. ಬೇಬಿ ಕೋಂ ತಿಮ್ಮಪ್ಪ 23–126, ಕಾಫಿಕಾಡು ಉಳ್ಳಾಲ
13. ಬಿ. ರಮಣಿ ಕೋಂ ಯು. ಕೃಷ್ಣಪ್ಪ 18–39/2, ಅಬ್ಬಂಜರ ಉಳ್ಳಾಲ
14. ಯು.ಕೇಶವ ಬಿನ್ ದಿ.ಕೆ ಮೋನಪ್ಪ ಮನೆನಂಬ್ರ: 23–104 ಗಾಂಧಿನಗರ ಉಳ್ಳಾಲ
15. ಶ್ರೀಮತಿ ಬೇಬಿ ಕೋಂ. ದಿ. ಲಕ್ಷ್ಮಣ ಗಾಂಧಿನಗರ ಮನೆನಂಬ್ರ: 23–112
16. ಶೋಭಾವತಿ ಯು ಕೋಂ ನರೇಂದ್ರ ಮನೆನಂಬ್ರ: 19–35 ಭಗವತೀ ರಸ್ತೆ ಉಳ್ಳಾಳ
17. ಸರೋಜಿನಿ ಕೋಂ ದಿ.ಶಂಕರ ಮನೆನಂಬ್ರ: 23–108/2 ಗಾಂಧಿನಗರ ಉಳ್ಳಾಲ
18. ಉಮೇಶ ಯು. ಮನೆನಂಬ್ರ: 23–113/1, ಗಾಂಧಿನಗರ ಉಳ್ಳಾಲ
19. ಸುಗಂಧಿ ಕೋಂ ಅರುಣ್ ಕುಮಾರ್, 19–35/1,ಮೇಲಂಗಡಿ ಉಳ್ಳಾಲ
20. ಯು.ಶಂಕರ ಬಿನ್ ದಿ ತನಿಯ 18–40 ಅಬ್ಬಂಜರ ಉಳ್ಳಾಲ
21. ಕಲಾವತಿ ಕೋಂ ಬೋಜ 3–65/14, ಚೆಂಬುಗುಡ್ಡೆ ಅಂಬೇಡ್ಕರ್ ನಗರ ಪೆರ್ಮನ್ನೂರು.
22. ಯು.ಶೇಷಪ್ಪ ಬಿನ್. ದಿ. ಆನಂದ ಗಾಂಧಿನಗರ ಮನೆನಂಬ್ರ: 23–132

2) ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳಿಗೆ ಪ್ರಾಕೃತಿಕ ವಿಕೋಪ ಗಂಭೀರ ಕಾಯಿಲೆ ಮತ್ತು ಅನಾರೋಗ್ಯಪೀಡಿತರಿಗೆ ಸಹಾಯಧನ ನೀಡುವ ಕುರಿತು.
ನಿರ್ಣಯ: ಈಗಾಗಲೇ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಶ್ರೀಮತಿ ಕುಸುಮಾ ಕೋಂ ಕೃಷ್ಣಪ್ಪ ಉಳ್ಳಾಲ ಮನೆ ನಂಬ್ರ: 23–102, ಗಾಂಧಿನಗರ, ಉಳ್ಳಾಲ ಇವರಿಗೆ ಕ್ಯಾನ್ಸರ್ ಚಿಕಿತ್ಸೆಗಾಗಿ ರೂ.10000–00ವನ್ನು ನೀಡುವುದೆಂದು ನಿರ್ಣಯಿಸಲಾಯಿತು.

3) ಉಳ್ಳಾಲ ಪುರಸಭಾ ವ್ಯಾಪ್ತಿಯ ಚೆಂಬುಗುಡ್ಡೆಯಲ್ಲಿ ಪರಿಶಿಷ್ಟ ವರ್ಗದವರಿಗೆ ಬುಟ್ಟಿ ಹೆಣೆಯಲು ಮತ್ತು ಪ್ರಾಕೃತಿಕ ವಿಕೋಪದ ತುರ್ತು ಗಂಜಿ ಕೇಂದ್ರದ ಉಪಯೋಗಕ್ಕಾಗಿ ಸಮುದಾಯ ಭವನ
ನಿರ್ಣಯ:ಸರಿಯಾದ ಸ್ಥಳವನ್ನು ಪರಿಶೀಲಿಸಿ ಟೆಂಡರು ಕರೆದು ನಿರ್ಮಿಸುವುದೆಂದು ನಿರ್ಣಯಿಸಲಾಯಿತು.

4) ಪರಿಶಿಷ್ಟ ಜಾತಿ ಪಂಗಡದ ಮಹಿಳಾ ಅಟೋ ಡ್ರೈವರ್‌ಗಳಿಗೆ ಅಟೋರಿಕ್ಷಾ ಖರೀದಿಗಾಗಿ ಮತ್ತು ಪುರುಷರಿಗೆ ಸ್ವ ಉದ್ಯೋಗ ಮಾಡಲು ತಲಾ ರೂ. 25000–00ದಂತೆ ಸಹಾಯಧನ
ನಿರ್ಣಯ:ಅರ್ಜಿಗಳನ್ನು ಸ್ವೀಕರಿಸಿ ನೀಡುವುದು ಎಂದು ನಿರ್ಣಯಿಸಲಾಯಿತು.

5) ಉಳ್ಳಾಲ ಪುರಸಭೆ ವ್ಯಾಪ್ತಿಯ ಅರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ/ಪಂಗಡದ ಮನೆಗಳಿಗೆ ಉಚಿತವಾಗಿ ನಳ್ಳಿನೀರಿನ ಜೋಡಣೆ ಒದಗಿಸುವುದು
ನಿರ್ಣಯ: ಉಳ್ಳಾಲ ಪುರಸಭೆಗೆ ಎಡಿಬಿ ಯೋಜನೆಯಿಂದ ನೀರುವಿತರಣೆ ಆಗುತ್ತಿರುವುದರಿಂದ ಸದ್ರಿ ಕೊಳವೆಯಿಂದ ಫಲಾನುಭವಿಗಳ ಮನೆತನಕ ಕೊಳವೆ ವಿಸ್ತರಿಸಿ ನಳ್ಳಿನೀರಿನ ಸಂಪರ್ಕ ಮಾಡಬೇಕಾಗಿದೆ. ಆದುದರಿಂದ ಸದ್ರಿ ಕಾಮಗಾರಿಯನ್ನು ಟೆಂಡರು ಕರೆದು ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸುವುದೆಂದು ನಿರ್ಣಯಿಸಲಾಯಿತು. ಹಾಗೂ ಪ್ರಥಮ ಪ್ರಾಶಸ್ತ್ಯದಲ್ಲಿ ಪೆರ್ಮನ್ನೂರು ಗ್ರಾಮದಲ್ಲಿ ರೈಲ್ವೆ ಹಳಿಯಿಂದ ಪೂರ್ವ ದಿಕ್ಕಿನಿಂದ ಎಲ್ಲಾ ಅಯ್ಕೆ ಫಲಾನುಭವಿಗಳಿಗೆ ಸಂಪರ್ಕ ನೀಡುವುದಾಗಿಯೂ, ಕಾಮಗಾರಿಯಿಂದ ಹೆಚ್ಚುವರಿ ಮೊತ್ತ ತಗುಲಿದ್ದಲ್ಲಿ 2009–2010ರ ಎಸ್.ಎಫ್.ಸಿ ನಿಧಿಯಿಂದ ಕ್ರಿಯಾಯೋಜನೆಯಡಿ ಮೀಸಲಿರಿಸಿ ಭರಿಸುವುದಾಗಿ ನಿರ್ಣಯಿಸಲಾಯಿತು.

6) ಉಳ್ಳಾಲ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡದ 20ಜನ ಫಲಾನುಭವಿಗಳಿಗೆ ತಲಾ ರೂ. 15000–00ದಂತೆ ಶೌಚಾಲಯ ವ್ಯವಸ್ಥೆ ಕುರಿತು.
ನಿರ್ಣಯ: ಪುರಸಭಾ ವ್ಯಾಪ್ತಿಯ ಈ ಕೆಳಗಿನ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳನ್ನು ರೂ 15000–00ದಂತೆ ಶೌಚಾಲಯ ನಿರ್ಮಾಣಕ್ಕಾಗಿ ಅಯ್ಕೆ ಮಾಡಲಾಯಿತು.
1. ಕೃಷ್ಣ ಬಿನ್. ದಿ. ಸುಬ್ಬ
2. ಗುಲಾಭಿ ಕೋಂ ಶ್ರೀನಿವಾಸ ಮನೆನಂಬ್ರ: 23–104/1
3. ದಿನೇಶ ಬಿನ್ ತುಕ್ರ ಮನೆನಂಬ್ರ: 23–91. ಕಾಫಿಕಾಡು ಉಳ್ಳಾಲ
4. ಭವಾನಿ ಕೋಂ ದಿ.ಸುಬ್ಬ ಗಾಂಧಿನಗರ ಉಳ್ಳಾಲ
5. ಭವಾನಿಶಂಕರ ಮನೆನಂಬ್ರ: 3–65/7(2) ಚೆಂಬುಗುಡ್ಡೆ

6. ಪ್ರೇಮ ಮನೆನಂಬ್ರ: 18-45/1 ಅಬ್ಬಂಜರ ಉಳ್ಳಾಲ
7. ಅಪ್ಪಿ ಮನೆನಂಬ್ರ 18-45/2 ಅಬ್ಬಂಜರ ಉಳ್ಳಾಲ
8. ಗೋಪಾಲ ಮನೆನಂಬ್ರ: 18-45, ಅಬ್ಬಂಜರ ಉಳ್ಳಾಲ
9. ಬಾಸ್ಕರ ಮನೆನಂಬ್ರ: 3-65/7(1) ಚೆಂಬುಗುಡ್ಡೆ
10. ಶಶಿಕಲಾ ಮನೆನಂಬ್ರ: 3-65/8 ಚೆಂಬುಗುಡ್ಡೆ
11. ನಳಿನಿ ಸೋಮಯ್ಯ ಮನೆನಂಬ್ರ: 23-137/1 ಉಳ್ಳಾಲ ಗಾಂಧಿನಗರ
12. ಭವಾನಿ ಮನೆನಂಬ್ರ; 23-96 ಗಾಂಧಿನಗರ ಉಳ್ಳಾಲ
13. ರಮೇಶ್ ಮನೆನಂಬ್ರ: 23-96/1 ಗಾಂಧಿನಗರ ಉಳ್ಳಾಲ
14. ಪ್ರೇಮ ಮನೆನಂಬ್ರ: 23-96/1, ಗಾಂಧಿನಗರ ಉಳ್ಳಾಲ
15. ಸುಶೀಲ ಮನೆನಂಬ್ರ: 23-84/4, ಗಾಂಧಿನಗರ ಉಳ್ಳಾಲ
16. ಶ್ರೀಮತಿ ಸೇಸಿ ಕೋಂ ಮಯ್ಯ ಕಾಪಿಕಾಡು ಉಳ್ಳಾಲ
17. ಗುರುವಪ್ಪ ಕೋಂ ಕೃಷ್ಣಪ್ಪ ಅಬ್ಬಂಜರ, ಮನೆನಂಬ್ರ: 18-38/4
18. ಶ್ರೀಮತಿ ಲಕ್ಷ್ಮಿ ಕೋಂ ರಮೇಶ್, ಮನೆನಂಬ್ರ: 3-65/19, ಚೆಂಬುಗುಡ್ಡೆ
19. ಕಲ್ಯಾಣಿ ಬಿನ್ ಕರಿಯ ಮನೆನಂಬ್ರ: 23-90 ಕಾಪಿಕಾಡು
20. ಶ್ರೀಮತಿ ಸುಮತಿ ಕೋಂ ದಿ. ಕೋಟಿ ಮನೆನಂಬ್ರ: 23-122, ಗಾಂಧಿನಗರ ಉಳ್ಳಾಲ

ವಿಷಯ:67: ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೋಟ್ಟು ಅಂಬೇಡ್ಕರ್ ಸಾಂಸ್ಕೃತಿಕ ರಂಗಮಂದಿರ ರಚನೆ ಕಾಮಗಾರಿಗೆ ರೂ 5ಲಕ್ಷ ಅಂದಾಜುಪಟ್ಟಿ ತಯಾರಿಸಿದ್ದು, ಕಾಮಗಾರಿಗೆ ರೂ. 1.50ಲಕ್ಷಗಿಂತ ಹೆಚ್ಚುವರಿ ವೆಚ್ಚ ತಗಲುವ ಬಗ್ಗೆ ಪರಿಷ್ಕೃತ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ನಿರ್ವಹಿಸುವ ಕುರಿತು.
ನಿರ್ಣಯ: ಸದ್ರಿ ಕಾಮಗಾರಿ ನಿರ್ವಹಿಸುವಾಗ ಹೆಚ್ಚುವರಿಯಾಗಿ ನಿರ್ವಹಿಸುವ ಕಾಮಗಾರಿಗೆ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸಿ ಪುರಸಭೆಯಿಂದ ಕಾಮಗಾರಿ ನಿರ್ವಹಿಸಿರುವ ಬಿಲ್ಲು ಪಾವತಿಸಲು ನಿರ್ಣಯಿಸಲಾಯಿತು.

ವಿಷಯ:68: ಉಳ್ಳಾಲ ಪುರಸಭೆ ವ್ಯಾಪ್ತಿಯ 8ನೇ ವಾರ್ಡು ಬಂಡಿಕೊಟ್ಯ ಸೇತುವೆಯಲ್ಲಿ 2ಇಂಚು ಕಬ್ಬಿಣದ ಪೈಪು ಇದ್ದು ಅದನ್ನು ತೆಗೆದು 2ಇಂಚಿನ 15ಮೀಟರ್ ಬ್ಲೂ ಪೈಪು ಅಳವಡಿಸುವರೇ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ; ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:69: ಉಳ್ಳಾಲ ಪುರಸಭಾ ವ್ಯಾಪ್ತಿಯ ಹಳೇಕೋಟೆ ಟ್ಯಾಂಕ್ ರಸ್ತೆಗೆ ಕಾಂಕ್ರೀಟಿಕರಣ ಕಾಮಗಾರಿಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಗುತ್ತಿಗೆದಾರರಾದ ಶ್ರೀ ವಿಶ್ವನಾಥ ಶೆಟ್ಟಿಯವರ ಟೆಂಡರು ದರ ಅಂದಾಜುಪಟ್ಟಿಯ ದರದಲ್ಲಿ ಕಾಮಗಾರಿ ನಿರ್ವಹಿಸುವುದಾಗಿ ಘಟನೋತ್ತರ ಮಂಜೂರಾತಿ ನೀಡುವುದಾಗಿ ನಿರ್ಣಯಿಸಲಾಯಿತು.

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಮುಖ್ಯಾಧಿಕಾರಿ,
ಉಳ್ಳಾಲ ಪುರಸಭೆ,ದ.ಕ